

ಇನ್ನು ಹಂಸಿನಿ ಈ ಕೊಲೆ ಮಾಡಿದ್ದಾಳೆ ಎನ್ನುವುದಕ್ಕೆ ಅವಳು ಮಹಡಿಯ ಮೇಲೆ ಹೇಗೆ ಬಂದಳು ಅನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಅಕಸ್ಮಾತ್ ಅವಳು ಮೇಲೆಯೇ ಇದ್ದು ಅವಳೇ ಗುಂಡು ಹೊಡೆದಿದ್ದರೆ... ವೀಲ್‌ಚೇರ್ ಮೇಲೆ ಕುಳಿತು ಹೊಡೆದ ಗುಂಡು ಆರಡಿ ಎತ್ತರದ ಬಾಳಿಗಾಗೆ ಹೊಟ್ಟೆಯ ಆ ಭಾಗದಲ್ಲಿ ನುಗ್ಗಬೇಕಾದರೆ, ಗುಂಡು ಕೆಳಗಿನಿಂದ ಮೇಲೆ ಹಾರಿರಬೇಕು. ಇನ್ನು, ಅನಂತರಾಮಯ್ಯ, ಅವನ ಹೇಳಿಕೆ ಕೇಸ್ ಇನ್ನಷ್ಟು ಕಾಂಪ್ಲಿಕೇಟ್ ಮಾಡುತ್ತಿದೆಯೇ ಹೊರತು ಸಾಲ್ವ್ ಮಾಡುತ್ತಿಲ್ಲ..."

"ಇನ್ಶೂರೆನ್ಸ್ ಹಣಕ್ಕಾಗಿ ಅಕ್ಕತಂಗಿ ಸೇರಿ ಕೊಲೆ ಮಾಡಿದ್ದಾರೆ ಅಂತ ಇಬ್ಬರನ್ನೂ ಕಟಕಟೆಯಲ್ಲಿ ನಿಲ್ಲಿಸಿದರೆ?"

"ಅದೇ ಈಗಿರುವ ಮೋಟಿವ್... ಅದನ್ನೇ ಅನಂತರಾಮಯ್ಯ ಹೇಳೋದು. ಅಕಸ್ಮಾತ್ ನಾವು ಅದನ್ನು ನಿರ್ಲಕ್ಷ್ಯ ಮಾಡಿದರೆ ಅವನೇ ಆ ಪಾಯಿಂಟ್ ಮುಂದೆ ತರುತ್ತಾನೆ. ತಿಳಿದೋ ತಿಳಿಯದೆಯೋ ನಾವು ಅವನನ್ನೂ ಇದರಲ್ಲಿ ಇನ್ವಾಲ್ವ್ ಮಾಡಿಕೊಂಡಿದ್ದೇವೆ."

"ಸುತ್ತಿ ಬಳಸಿ ಈ ಕೊಲೆ ಕೇಸ್‌ನ ಮೋಟಿವ್ ಏನೇ ಬಂದರೂ ಕೊಲೆ ಹೇಗಾಯಿತು, ಮಾಡಿದ್ದು ಯಾರು ಎನ್ನುವುದು ಸಾಬೀತು ಮಾಡುವುದು ಕಷ್ಟ."

"ಹಾಗಾದ್ರೆ ಈ ಕೇಸ್ ಸರ್..."

"ಒಂದು ರೀತಿ ಡೆಡ್ ಎಂಡ್... ನಂದಿನಿಗೆ ಬೇಲ್ ಸಿಗುವುದರಲ್ಲಿ ಸಂಶಯವೇ ಇಲ್ಲ..."

ಭೂಷಣನ ಮಾತುಗಳಲ್ಲಿ ಬೇಸರ ತುಂಬಿತ್ತು. ಜೀವನದಲ್ಲಿ ಮೊದಲಬಾರಿಗೆ ಒಂದು ಕೊಲೆ ಕೇಸ್ ಅವನ ಕಣ್ಣ ಮುಂದೆಯೇ ಸಾಲ್ವ್ ಆಗದೆ ಉಳಿದು ಹೋಗಿತ್ತು.

***

"ಹಂಸಾ ರೆಡಿಯಾ..."

ನಂದಿನಿ ಜೋರಾಗಿ ಕೂಗಿದಳು. ಜೀನ್ಸ್ ಪ್ಯಾಂಟ್ ಟೀ ಶರ್ಟ್ ತೊಟ್ಟು, ಕಣ್ಣಿಗೊಂದು ಕನ್ನಡಕ ಹಾಕಿಕೊಂಡು ಹಾಲ್‌ನಲ್ಲಿ ಕುಳಿತಿದ್ದಳು. ಇಡೀ ಹಾಲ್ ತುಂಬಾ ಸೂಟ್‌ಕೇಸ್‌ಗಳು, ಸಾಮಾನುಗಳು... ಎಲ್ಲಿಗೋ ಹೊರಡುವ ತಯಾರಿ.

"ಎರಡೇ ನಿಮಿಷ ಅಕ್ಕಾ... ಬಂದೆ..."

ಅಡುಗೆಮನೆಯಿಂದ ಹೊರಬಂದ ಅನಂತರಾಮಯ್ಯ, "ಬೇಗ ಬೇಗ ಹೊರಡಿ...